# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 29-3-2022ರ ಮಂಗಳವಾರದಂದು ಪೂರ್ವಾಹ್ನ 11-30 ಗಂಟೆಗೆ ಜರುಗಿದ ಸಿಂಡಿಕೇಟ್‌ನ ಮೂರನೇ ಸಾಮಾನ್ಯ ಸಭೆಯ ನಡವಳಿ.

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಪ್ರೊ. ಜಿ ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಕೆ.ಸಿ.ವೀರಭದ್ರಯ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ರಮೇಶ್ | ಸದಸ್ಯರು |
| 4. | ಶ್ರೀ ಎಂ ಬಿ ಗಪ್ಪಣ್ಣ | ಸದಸ್ಯರು |
| 5. | ಡಾ. ವೆಂಕಟೇಶಯ್ಯ | ಸದಸ್ಯರು |
| 6. | ಡಾ. ನಾಗರಾಜು | ಸದಸ್ಯರು |
| 7. | ಡಾ. ಗೋವಿಂದರಾಜು | ಸದಸ್ಯರು |
| 8. | ಡಾ. ಕೆ ವಿ ಸುರೇಶ | ಸದಸ್ಯರು |
| 9. | ಪ್ರೊ. ಜಿ ವೆಂಕಟೇಶ್ ಕುಮಾರ್ | ಸದಸ್ಯರು |
| 10. | ಶ್ರೀ ಆರ್ ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್ ಡಿ ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ ಕೆ ಪವಿತ್ರ | ಸದಸ್ಯರು |
| 13. | ಡಾ. ಈ ಸಿ ನಿಂಗರಾಜ್ ಗೌಡ | ಸದಸ್ಯರು |
| 14. | ಡಾ. ಎಂ ಎಸ್ ದಾಮೋಧರ | ಸದಸ್ಯರು |
| 15. | ಪ್ರೊ. ಎ ಪಿ ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಪ್ರೊ. ಆರ್ ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |
| 17. | ಡಾ. ಸಂಗೀತಾ ಗಜಾನನ ಭಟ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಆನ್‌ಲೈನ್‌ನಲ್ಲಿ ಹಾಜರಾದ ಸದಸ್ಯರು:**

| | | |
|---|---|---|
| 1. | ಡಾ. ಸೈಯದ್ ಕಾರ್ರು ಮೊಹಿದ್ದೀನ್ | ಸದಸ್ಯರು |
| 2. | ಡಾ. ಚೈತ್ರ ನಾರಾಯಣ | ಸದಸ್ಯರು |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ನಂತರ ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

ಎಲ್ಲಾ ಸದಸ್ಯರುಗಳು ವಿದ್ಯಾರ್ಥಿನಿಲಯ ಡೀನರನ್ನು ಬದಲಾವಣೆ ಮಾಡಿರುವ ಕುರಿತು, ಕುಲಸಚಿವರ ಮತ್ತು ಕುಲಪತಿಗಳ ಆಪ್ತ ಸಿಬ್ಬಂದಿ/ಆಪ್ತಕಾರ್ಯದರ್ಶಿಗಳ ಬದಲಾವಣೆ ಹಾಗೂ ಇತರ ವಿಷಯವಾಗಿ ಸಾಕಷ್ಟು ಸಭೆಗಳಲ್ಲಿ ಚರ್ಚಿಸಲಾಗಿದ್ದು ಮಾನ್ಯ ಕುಲಪತಿಗಳು ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಮುಂದೂಡುತ್ತಾ ಬಂದಿರುತ್ತಾರೆ. ಆದ್ದರಿಂದ ಸದರಿ ವಿಷಯಗಳ ಕುರಿತು ಇಂದಿನ ಸಭೆಯಲ್ಲೇ ಚರ್ಚೆ ನಡೆಸಬೇಕೆಂದು, ಇಲ್ಲವಾದಲ್ಲಿ ಇಂದಿನ ಯಾವುದೇ ವಿಷಯಗಳ ಬಗ್ಗೆ ಚರ್ಚೆ ಮಾಡಲು ಸಿದ್ಧರಿಲ್ಲವೆಂದು ಎಲ್ಲಾ ಸದಸ್ಯರು ಪಟ್ಟು ಹಿಡಿದರು.

ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ 2022-23ನೇ ಸಾಲಿನ ಆಯವ್ಯಯವನ್ನು ಸರ್ಕಾರಕ್ಕೆ ತುರ್ತಾಗಿ ಕಳುಹಿಸಿಕೊಡಬೇಕಾಗಿರುವುದರಿಂದ ಸಿಂಡಿಕೇಟ್ ಸಭೆಯಲ್ಲಿ 2022-23ನೇ ಸಾಲಿನ ಆಯವ್ಯಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಗುವುದು ಉಳಿದ ಕಾರ್ಯಸೂಚಿ ವಿಷಯಗಳನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸುವುದಾಗಿ ತಿಳಿಸಿದರು. ಎಲ್ಲಾ ಸಿಂಡಿಕೇಟ್ ಸದಸ್ಯರು ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

| | |
|---|---|
| **2022/3.4** | 2022-23ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿ (ಅನುಬಂಧ-1)ಯನ್ನು 'ಸಿಂಡಿಕೇಟ್' ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ |
| | ಮಾನ್ಯ ಹಣಕಾಸು ಅಧಿಕಾರಿಗಳು ಮಾತನಾಡಿ, 2022-23ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಇದನ್ನು ಹಣಕಾಸು ಸಮಿತಿಯ ಮುಂದೆ ಮಂಡಿಸಲಾಗಿದೆ. 2022-23ನೇ ಆರ್ಥಿಕ ಸಾಲಿನಲ್ಲಿ ಒಟ್ಟಾರೆಯಾಗಿ ರೂ. 393,84,10,000/-ಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ಇದರಲ್ಲಿ ಸರ್ಕಾರದಿಂದ ರೂ. 221,75,00,000/-ಗಳು, ವಿಶ್ವವಿದ್ಯಾನಿಲಯದ ಆಂತರಿಕ ಆದಾಯ ರೂ.104,00,00,000/-ಗಳು ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ಹಾಗೂ ಸ್ವಯಂ ಆರ್ಥಿಕ ಆಧಾರಿತ ಯೋಜನೆಗಳ ಒಟ್ಟು 21 ಖಾತೆಗಳಿಂದ ರೂ.68,09,00,000/-ಗಳು, ಇವುಗಳೆಲ್ಲವೂ ಒಳಗೊಂಡಂತೆ ಒಟ್ಟಾರೆಯಾಗಿ ರೂ.393,84,10,000/-ಗಳ ಆದಾಯವನ್ನು ನಿರೀಕ್ಷಿಸಲಾಗಿದೆ.<br><br>ಇನ್ನು 2022-23ನೇ ಸಾಲಿನ ಆಯವ್ಯಯದ ಅಂದಾಜಿನ ವೆಚ್ಚ ನೋಡುವುದಾದರೇ, ವೇತನ, ಪಿಂಚಣಿ, ಸಾಮಾನ್ಯ ಆಡಳಿತ ವೆಚ್ಚಗಳು, ಬೋಧನಾ/ಸಂಶೋಧನೆ/ವಿಸ್ತರಣಾ ಚಟುವಟಿಕೆಗಳು, ವಿದ್ಯಾರ್ಥಿ ಕ್ಷೇಮಪಾಲನಾ ಕಾರ್ಯಕ್ರಮಗಳು ಹಾಗೂ ಪರೀಕ್ಷಾ ಚಟುವಟಿಕೆಗಳು ಒಟ್ಟು ರೂ. 326,37,34,129/-ಗಳು ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ಹಾಗೂ ಸ್ವಯಂ ಆರ್ಥಿಕ ಆಧಾರಿತ ಯೋಜನೆಗಳ ಒಟ್ಟು 21 ಖಾತೆಗಳಿಂದ |

| | |
|---|---|
| | ರೂ.59,00,11,054/-ಗಳು ಇವುಗಳೆಲ್ಲವನ್ನು ಒಳಗೊಂಡಂತೆ ಒಟ್ಟಾರೆಯಾಗಿ ರೂ.385,37,45,183/-ಗಳು ವೆಚ್ಚವಾಗುವುದೆಂದು ನಿರೀಕ್ಷಿಸಲಾಗಿದೆ.<br><br>ನಿರೀಕ್ಷಿತ ಆದಾಯ ರೂ.393,84,10,000/-ಗಳು ಮತ್ತು ಒಟ್ಟಾರೆ ನಿರೀಕ್ಷಿತ ವೆಚ್ಚ ರೂ.385,37,45,183/-ಗಳಾದಲ್ಲಿ, ವಿಶ್ವವಿದ್ಯಾನಿಲಯಕ್ಕೆ 2022-23ನೇ ಸಾಲಿನಲ್ಲಿ ಉಳಿತಾಯ ರೂ. 8,46,64,817/- ಆಗುವ ನಿರೀಕ್ಷೆಯಲ್ಲಿದ್ದೇವೆ ಎಂದು ಸಭೆಯ ಗಮನಕ್ಕೆ ತಂದರು.<br><br>ಒಟ್ಟಾರೆಯಾಗಿ 2022-23ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಹಾಗೂ ಸಿಂಡಿಕೇಟ್ ಸಭೆಯ ಗಮನಕ್ಕೆ ತರುತ್ತಾ ತಮ್ಮ ಸಲಹೆ ಸೂಚನೆಗಳು ನೀಡಬೇಕಾಗಿ ತಿಳಿಸಿದರು.<br><br>ಶ್ರೀ ಎಸ್ ಡಿ ದೊಡ್ಡಚಾರಿರವರು ಮಾತನಾಡಿ, 2022-23ನೇ ಸಾಲಿನ ಆಯವ್ಯಯದಲ್ಲಿ ಮಾನಸಗಂಗೋತ್ರಿ ಶಾಲೆಗೆ ಅನುದಾನ ನೀಡದಿರುವುದು ಸ್ವಾಗತಾರ್ಹ, ಏಕೆಂದರೆ ಅವರು ವಿಶ್ವವಿದ್ಯಾನಿಲಯದ ನಿಯಮವನ್ನು ಪಾಲನೆ ಮಾಡುತ್ತಿರಲಿಲ್ಲ. ಆದ್ದರಿಂದ ಅವರಿಗೆ ಈ ಬಾರಿ ಅನುಧಾನವನ್ನು ಮಂಜೂರು ಮಾಡದಿರುವುದು ಒಳ್ಳೆಯದೇ ಎಂದು ತಿಳಿದರು.<br><br>ಡಾ. ಎಂ ಎಸ್ ದಾಮೋಧರ್‌ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ತಾತ್ಕಾಲಿಕ ನೌಕರರ ವೇತನದಲ್ಲಿ ಪ್ರತಿ ತಿಂಗಳು ವ್ಯತ್ಯಾಸ ಕಾಣುತ್ತಿದೆ ಇದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಹಣಕಾಸು ಅಧಿಕಾರಿಗಳು ವಿಭಾಗದಿಂದ ನೀಡುವ ಹಾಜರಾತಿಯ ನಕಲು ಪ್ರತಿಗಳಿಗೆ ವಿಭಾಗದ ಅಧ್ಯಕ್ಷರುಗಳಿಂದ ದೃಢೀಕರಿಸಿ ನೀಡುವ ಹಾಜರಾತಿಯ ಅನುಗುಣವಾಗಿ ವೇತನ ಪಾವತಿಸಲಾಗಿದೆ ಎಂದು ತಿಳಿಸಿದರು. ಡಾ. ಎಂ.ಎಸ್.ದಾಮೋಧರ್ ಮತ್ತು ಶ್ರೀಎಸ್.ಡಿ.ದೊಡ್ಡಚಾರಿ ರವರು ಮಾತನಾಡಿ, ಹಾಗಾದರೆ ತಾತ್ಕಾಲಿಕ ನೌಕರರ ವೇತನ ಪಾವತಿಯ ಸೆಪ್ಟೆಂಬರ್, ಅಕ್ಟೋಬರ್ ಹಾಗೂ ನವೆಂಬರ್ ತಿಂಗಳ ಹಾಜರಾತಿ ಪ್ರತಿಗಳನ್ನು ನೀಡಬೇಕಾಗಿ ಮಾನ್ಯ ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು ಹಾಗೂ ಕುಲಸಚಿವರಿಗೆ ವಿಭಾಗದ ಅಧ್ಯಕ್ಷರು ವಿಭಾಗದ ಕೆಲಸಕಾರ್ಯಕ್ಕೆ ನೌಕರರ ಬೇಡಿಕೆಯನ್ನು ಇಡುವ ಪತ್ರವನ್ನು ಸಹ ನೀಡಬೇಕಾಗಿ ತಿಳಿಸಿದರು.<br><br>ಪ್ರೊ. ಜಿ ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸಬೇಕಾಗಿ ಮಾನ್ಯ ಕುಲಪತಿಗಳಲ್ಲಿ ಮನವಿ ಮಾಡಿಕೊಂಡರು ಹಾಗೂ 2022-23ನೇ ಸಾಲಿನ ಆಯವ್ಯಯದಲ್ಲಿ ವಿಶ್ವವಿದ್ಯಾನಿಲಯದ ತಾತ್ಕಾಲಿಕ ಅಧ್ಯಾಪಕರ ವೇತನಕ್ಕಿಂತ ತಾತ್ಕಾಲಿಕ ಅಧ್ಯಾಪಕೇತರ ನೌಕರರಿಗೆ ಹೆಚ್ಚು ಹಣ ಬಿಡುಗಡೆ ಮಾಡಲಾಗುತ್ತಿದೆ ಇದು ಅಗತ್ಯವಿದೆಯಾ? ಎಂದು ತಿಳಿಸಿದರು. ಶ್ರೀ ಎಸ್ ಡಿ ದೊಡ್ಡಚಾರಿರವರು ಮಾತನಾಡಿ, ನಾವು ಸಂಶೋಧನೆಗೆ ಹೆಚ್ಚು ಹಣವನ್ನು ಮೀಸಲಿಡಬೇಕು ಆದರೆ ಇಲ್ಲಿ ಅಧ್ಯಾಪಕೇತರರಿಗೆ ಹೆಚ್ಚು ಹಣ ಮೀಸಲಿಡಲಾಗುತ್ತಿದೆ ಹೀಗೆ ಮಾಡುವುದರಿಂದ ವಿಶ್ವವಿದ್ಯಾನಿಲಯ ಹೇಗೆ ಬೆಳವಣಿಗೆಯಾಗುತ್ತದೆ ಎಂದು ಪ್ರಶ್ನಿಸಿದರು.<br><br>ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ವೇತನ ಹೇಗೆ ಪಾವತಿಸಲಾಗುತ್ತಿದೆ ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ನೌಕರರ ವೇತನ ಶೀರ್ಷಿಕೆಯಿಂದಲೇ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕೇತರರಿಗೆ ವೇತನ ಪಾವತಿ ಮಾಡಲಾಗುತ್ತಿದೆ ಮತ್ತು ಅಧ್ಯಾಪಕರಿಗೆ ಅಲ್ಲಿಯ ಸಂಪನ್ಮೂಲಗಳಿಂದ ವೇತನ |

| | |
|---|---|
| | ಪಾವತಿಸಲಾಗುತ್ತಿದೆ ಎಂದು ತಿಳಿಸಿದರು, ಮುಂದಿನ ಬಾರಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಶೀರ್ಷಿಕೆ ತೆರೆದು ಅದರಲ್ಲಿಯೇ ವೇತನ ಪಾವತಿ ಮಾಡುವ ಆಲೋಚನೆ ಇದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ ಶಿಷ್ಯವೇತನವನ್ನು ಹೆಚ್ಚಳ ಮಾಡಿ ಎಂದು ಕುಲಸಚಿವರಲ್ಲಿ ಮನವಿ ಮಾಡಿದರು.<br><br>ಡಾ ಎಂ ಎಸ್ ದಾಮೋಧರ್‌ರವರು ಮಾತನಾಡಿ, ಯುವರಾಜ ಕಾಲೇಜಿನ ಸ್ವಾಯತತೆ ಕುರಿತಾಗಿ ಹಣಕಾಸಿನ ಆಯವ್ಯಯವನ್ನು ನಮ್ಮ ವಿಶ್ವವಿದ್ಯಾನಿಲಯದಿಂದಲೇ ನಡೆಸಬೇಕಾಗಿ ಮನವಿ ಮಾಡಿಕೊಂಡರು. |
| ತೀರ್ಮಾನ | **2022-23ನೇ ಸಾಲಿನ ಆಯ್ಯವ್ಯಯದ ಕುರಿತು ಸುರ್ಧೀರ್ಘವಾಗಿ ಚರ್ಚಿಸಿ ಕೊನೆಯದಾಗಿ ಮಾನ್ಯ ಕುಲಪತಿಗಳು ಮಾತನಾಡಿ, 2022-23ನೇ ಸಾಲಿನ ಸಿದ್ದಪಡಿಸಿರುವ ಕರಡು ಆಯವ್ಯಯದಲ್ಲಿ ತಾವು ನೀಡಿರುವ ಸಲಹೆ ಸೂಚನೆಗಳನ್ನು ತಿದ್ದುಪಡಿ ಮಾಡಲಾಗುತ್ತದೆ ಎಂದು ತಿಳಿಸಿದರು. ಮಾನ್ಯ ಕುಲಸಚಿವರು ಮಾತನಾಡಿ, ಮತ್ತೇನಾದರೂ 2022-23ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಬೇಕಾದರೆ ಪತ್ರಗಳ ಮುಖೇನ ನೀಡಲು ತಿಳಿಸಿದರು. 2022-23ನೇ ಆರ್ಥಿಕ ಸಾಲಿನ ಆಯವ್ಯಯವನ್ನು ಎಲ್ಲಾ ಸದಸ್ಯರು ಸಮ್ಮತಿಸಿ ಅನುಮೋದಿಸಿದರು.** |

<u>ಇತರೆ ವಿಷಯಗಳು:</u>

| | |
|---|---|
| 01 | ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯ ನಡವಳಿಯ ಪ್ರತಿಯನ್ನು ಸಿಂಡಿಕೇಟ್ ಸದಸ್ಯರಿಗೆ ನೀಡಿಲ್ಲ ಎಂದು ಶ್ರೀ ಎಂ ಬಿ ಗಪ್ಪಣ್ಣ, ಶ್ರೀ ಆರ್ ಪ್ರದೀಪ್ ಕುಮಾರ್ ದೀಕ್ಷಿತ್, ಶ್ರೀ ಎಸ್ ಡಿ ದೊಡ್ಡಚಾರಿ, ಡಾ. ಈ ಸಿ ನಿಂಗರಾಜ್ ಗೌಡ ಹಾಗೂ ಡಾ. ಎಂ.ಎಸ್.ದಾಮೋಧರ ರವರು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಎರಡನೇ ಸಾಮಾನ್ಯ ಸಿಂಡಿಕೇಟ್ ಸಭೆಯು ಮುಗಿದ ನಂತರ ತಕ್ಷಣವೇ ಘಟಿಕೋತ್ಸವದ ಕಾರ್ಯಕ್ರಮ ಹಾಗೂ ಕುಲಪತಿಗಳ ಸಮ್ಮೇಳನ ಕಾರ್ಯಕ್ರಮಗಳು ಇದ್ದುದರಿಂದ ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯ ನಡವಳಿಯ ಪ್ರತಿಯನ್ನು ಸಿಂಡಿಕೇಟ್ ಸದಸ್ಯರಿಗೆ ನೀಡಿರುವುದಿಲ್ಲ ಅದಷ್ಟು ಬೇಗ ನೀಡುವ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು. |
| 02 | ಡಾ. ಎಂ ಎಸ್ ದಾಮೋಧರ್, ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್ ಹಾಗೂ ಶ್ರೀ ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ಆಪ್ತ ಸಿಬ್ಬಂದಿಯವರನ್ನು ಬದಲಾವಣೆ ಮಾಡಿ ಎಂದು ಕೋರಿದ್ದರೂ ಇದುವರೆಗೂ ಬದಲಾವಣೆ ಮಾಡಿರುವುದಿಲ್ಲ, ಇಂತಹ ಬೆಳವಣಿಗೆಯಿಂದ ಸಿಂಡಿಕೇಟ್ ಸದಸ್ಯರ ಮಾತಿಗೆ ಬೆಲೆಯೇ ಇಲ್ಲದಂತಾಗಿದೆ, ಕಳೆದ 03-04 ಸಭೆಯಲ್ಲಿ ಇದನೇ ಚರ್ಚೆ ಮಾಡಿದರೂ ಕೂಡ ತಾವು ಕ್ರಮ ಕೈಗೊಳ್ಳದಿರುವುದು ನಮಗೆ ಬೇಸರ ಉಂಟು ಮಾಡಿದೆ ಎಂದು ತಿಳಿದರು ಇದಕ್ಕೆ ಪ್ರೊ. ಜಿ ವೆಂಕಟೇಶ್ ಕುಮಾರ್ ರವರು ಸಹ ಧ್ವನಿಗೂಡಿಸಿದರು. |
| 03 | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ ನಾವು ಕೊಡುವ ವಿಷಯಗಳನ್ನು ಕಾರ್ಯಸೂಚಿಯಲ್ಲಿ ನಮೂದಿಸುವುದಿಲ್ಲ, ಇದ್ದೆಲ್ಲಾ ಸಂಗತಿಗಳು ನಮಗೆ ಬೇಸರ ಉಂಟು ಮಾಡಿದೆ ಎಂದು ತಿಳಿಸಿದರು. |
| 04 | ಶ್ರೀ ಎಸ್.ಡಿ. ದೊಡ್ಡಚಾರಿ, ಪ್ರೊ. ಜಿ ವೆಂಕಟೇಶ್ ಕುಮಾರ್ ಹಾಗೂ ಶ್ರೀ ಎಂ ಎಸ್ ಗಪ್ಪಣ್ಣನವರು ಮಾತನಾಡಿ, ಸಿಂಡಿಕೇಟ್ ಸದಸ್ಯರ ಒಪ್ಪಿಗೆ ಇಲ್ಲದೆ ವಸತಿ ನಿಲಯದ ಡೀನರನ್ನು |

| | |
|---|---|
| | ಬದಲಾವಣೆ ಮಾಡಿದ್ದೀರಾ, ಸದರಿ ವಿಷಯವನ್ನು ಸಿಂಡಿಕೇಟ್ ಸದಸ್ಯರೊಂದಿಗೆ ಪ್ರಸ್ತಾಪ ಮಾಡಬೇಕಾಗಿತ್ತು ಎಂದು ಮಾನ್ಯ ಕುಲಪತಿಯವರನ್ನು ಪ್ರಶ್ನಿಸಿದರು.<br>ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಮಾತನಾಡಿ ಇಂದಿನ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಚರ್ಚಿಸಲಾಗುವುದು ಎಂದು ಮಾನ್ಯ ಕುಲಪತಿಯವರು ತಿಳಿಸಿದ್ದೀರಿ ಆದ್ದರಿಂದ ಇದರ ಬಗ್ಗೆ ಸಂಪೂರ್ಣವಾದ ವಿವರಣೆಯನ್ನು ಕೊಡಿ ಹಾಗೂ ಡೀನರ ಬದಲಾವಣೆ ಸಂಬಂಧ ಸಮಿತಿಯ ಸದಸ್ಯರಿಗೆ ಮಾಹಿತಿ ನೀಡಬೇಕಾಗಿತ್ತು ಎಂದು ಮಾನ್ಯ ಕುಲಪತಿಯವರಿಗೆ ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಘಟಿಕೋತ್ಸವ ಹಾಗೂ All India National Seminar of Vice Chancellors ಕಾರ್ಯಕ್ರಮಗಳಿದ್ದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳೊಂದಿಗೆ ತಾವು ಮುಂದಿನ ಸಭೆಯಲ್ಲಿ ಮಂಡಿಸುತ್ತೇವೆಂದು ತಿಳಿಸಿದರು.<br><br>ಡಾ. ಈ ಸಿ ನಿಂಗರಾಜ್‌ಗೌಡ ರರವರು ಮಾತನಾಡಿ, ಹಿಂದಿನ ಡೀನ್‌ರನ್ನು ಬದಲಾವಣೆ ಮಾಡುವುದಕ್ಕೆ ಕೆಲವರು ಹಣವನ್ನು ತೆಗೆದುಕೊಂಡಿದ್ದಾರೆ ಎಂದು ಆರೋಪಿಸಿದರು. ಮುಂದುವರಿದು ವಿದ್ಯಾರ್ಥಿಗಳು ಧರಣಿ ಮಾಡುತ್ತಿರುವ ಉದ್ದೇಶವೇನು ಎಂದು ಪ್ರಶ್ನಿಸಿದರು. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಊಟ ಸಿಗುತ್ತಿಲ್ಲ ಅವರಿಗೆ ತುಂಬಾ ತೊಂದರೆಯುಂಟಾಗುತ್ತಿದೆ ಹಾಗೂ ಅನಧಿಕೃತವಾಗಿ ವಸತಿ ನಿಲಯದಲ್ಲಿ ವಾಸ ಮಾಡುತ್ತಿರುವವರನ್ನು ಕೂಡಲೇ ತೆರವುಗೊಳಿಸಬೇಕೆಂದು ಮತ್ತು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ನಷ್ಟವಾಗುತ್ತಿರುವುದನ್ನು ತಡೆಗಟ್ಟಬೇಕೆಂದು ಅಗ್ರಹಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪದೇ ಪದೇ ವಿದ್ಯಾರ್ಥಿಗಳು ಧರಣಿಯನ್ನು ಹೂಡುತ್ತಿದ್ದರು ಹಿಂದಿನ ಡೀನರು ಧರಣಿಯನ್ನು ನಿಲ್ಲಿಸುವ ಪ್ರಯತ್ನವನ್ನು ಮಾಡುತ್ತಿರಲಿಲ್ಲ. ಎಲ್ಲಾ ಕೆಲಸಗಳನ್ನು ಬಿಟ್ಟು ಧರಣಿಯನ್ನು ನಿಲ್ಲಿಸುವುದಕ್ಕೆ ತಾವು ತೆರಳುತ್ತಿದ್ದೇವು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದರಿಂದ ಅವರನ್ನು ಬದಲಾವಣೆ ಮಾಡಿ ಸದರಿ ಡೀನರನ್ನು ನೇಮಕ ಮಾಡಲಾಯಿತು ಎಂದು ಸಭೆಗೆ ತಿಳಿಸಿದರು.<br>ಡಾ. ಚೈತ್ರ ನಾರಾಯಣರವರು ಆನ್‌ಲೈನ್ ಮೂಲಕ ಮಾತನಾಡಿ ವಸತಿ ನಿಲಯದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಿಂತ ಅನಧಿಕೃತವಾಗಿ ವಾಸವಿರುವವರ ಸಂಖ್ಯೆ ಹೆಚ್ಚಾಗಿದೆ ಆದ್ದರಿಂದ ಸಂಶೋಧನೆ ಮುಗಿದಿರುವ ವಿದ್ಯಾರ್ಥಿಗಳು ಹಾಗೂ ಅನಧಿಕೃತವಾಗಿ ವಾಸವಿರುವವರನ್ನು ವಸತಿ ನಿಲಯದಿಂದ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಿ ಎಂದು ಮಾನ್ಯ ಕುಲಪತಿಯವರಿಲ್ಲಿ ಮನವಿ ಮಾಡಿದರು.<br><br>ಡಾ. ಎಂ ಎಸ್ ದಾಮೋದರ್‌ರವರು ಎಲ್ಲಾ ವಿದ್ಯಾರ್ಥಿಗಳಿಗೆ ಗುರುತಿನ ಚೀಟಿಯನ್ನು ನೀಡಿ ಎಂದು ಸಲಹೆ ನೀಡಿದರು. ಮುಂದುವರೆದು, ಮುಂಜಾನೆ ಮತ್ತು ರಾತ್ರಿ ವೇಳೆಯಲ್ಲಿ ವಸತಿ ನಿಲಯಕ್ಕೆ ಭೇಟಿ ನೀಡಿದ್ದಲ್ಲಿ ಅನಧಿಕೃತವಾಗಿ ವಾಸವಿರುವವರನ್ನು ಕಂಡು ಹಿಡಿಯಬಹುದೆಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ ಯಾವುದೇ ಮುನ್ಸೂಚನೆ ನೀಡದೆ ಸಿಂಡಿಕೇಟ್ ಸದಸ್ಯರು ಪೊಲೀಸ್‌ನವರೊಂದಿಗೆ ವಸತಿ ನಿಲಯಕ್ಕೆ ಭೇಟಿ ನೀಡಿ ಮಾಹಿತಿ ನೀಡಿದ್ದಲ್ಲಿ ಅನಧಿಕೃತವಾಗಿ ವಾಸಮಾಡುತ್ತಿರುವವರನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. |

| | |
|---|---|
| 05 | ಶ್ರೀಮತಿ ಪವಿತ್ರಾ ವೈ ಕೆ ರವರು ಮಾತನಾಡಿ ಪತ್ರಿಕಾ ಮತ್ತು ಸಂವಹನ ಅಧ್ಯಯನ ವಿಭಾಗಕ್ಕೆ ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ತಿಳಿಯುವ ಸಂಬಂಧ ಭೇಟಿ ನೀಡಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ವಿರುದ್ಧವಿರುವುದು ಕಂಡು ಬಂದಿರುವುದು ವಿಷಾದನೀಯ ಎಂದು ತಿಳಿಸಿದರು. |
| 06 | ಶ್ರೀ ಎಸ್ ಡಿ ದೊಡ್ಡಚಾರಿಯವರು ಮಾತನಾಡಿ ಯಾವ ಯಾವ ವಿಷಯಕ್ಕೆ ಲೆಕ್ಕ ಪರಿಶೋಧಕರು ಆಕ್ಷೇಪಣೆ ಮಾಡಿರುವ ವಿವರಗಳನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿರುವುದಿಲ್ಲ, ಇದು ಕರ್ತವ್ಯಲೋಪವಾಗುತ್ತಿದೆ ದಯಮಾಡಿ ಇದನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಕೋರಿದರು. |
| 07 | ಡಾ. ಎಂ ಎಸ್ ದಾಮೋದರ್ ಹಾಗೂ ಶ್ರೀ ಎಸ್ ಡಿ ದೊಡ್ಡಚಾರಿಯವರು IOE ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಯೋಜಕರನ್ನು ಬದಲಾವಣೆ ಮಾಡಬೇಕೆಂದು ಒತ್ತಾಯ ಮಾಡಿದರು. ಅವರ ಬದಲು ನಮ್ಮ ವಿಶ್ವವಿದ್ಯಾನಿಲಯದ ಯಾರಾದರೂ ಹಿರಿಯ ಪ್ರಾಧ್ಯಾಪಕರನ್ನು ಸಂಯೋಜಕರನ್ನಾಗಿ ನೇಮಕ ಮಾಡಿ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಕುಲಪತಿಗಳು ತಮ್ಮ ಸಮ್ಮತಿಯನ್ನು ಸೂಚಿಸಿದರು. |
| 08 | ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ಮುಂದಿನ ಘಟಿಕೋತ್ಸವದಲ್ಲಿ ಖಾದಿ ಸಮವಸ್ತ್ರವನ್ನು ಕುಲಾಧಿಪತಿಗಳು, ಕುಲಸಚಿವರು, ಅಧಿಕಾರಿಗಳು, ಸಿಂಡಿಕೇಟ್ ಸದಸ್ಯರು, ವಿದ್ಯಾವಿಷಯಕ ಪರಿಷತ್ ಸದಸ್ಯರು ಹಾಗೂ ಅತಿಥಿಗಳು ಧರಿಸಲು ನಿರ್ಧರಿಸಿರುವುದರಿಂದ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಸಭೆಗಳು ನಡೆದಿದ್ದು, ಶ್ರೀಮತಿ ಆಶಾ, ವಸ್ತ್ರ ವಿನ್ಯಾಸಕಿಯವರು ವಿವಿಧ ರೀತಿಯಲ್ಲಿ ಹಾಗೂ ವಿವಿಧ ಬಣ್ಣಗಳಿಂದ ಖಾದಿ ಬಟ್ಟೆಯಲ್ಲಿ ವಸ್ತ್ರಗಳನ್ನು ಸಿದ್ದಪಡಿಸಿರುವುದನ್ನು ಸಭೆಯಲ್ಲಿ ಪ್ರಸ್ತುತ ಪಡಿಸುತ್ತಾರೆಂದು ತಿಳಿಸಿದರು. ಶ್ರೀಮತಿ ಆಶಾ, ವಸ್ತ್ರ ವಿನ್ಯಾಸಕಿಯವರು ಸಿದ್ದಪಡಿಸಿರುವ ಉಡುಪುಗಳನ್ನು ಸಭೆಯಲ್ಲಿ ಪ್ರಸುತ ಪಡಿಸಿದರು. ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಲಾಗುವುದೆಂದು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು. |
| 9 | ಡಾ. ಎಂ ಎಸ್ ದಾಮೋಧರ್‌ರವರು ಮಾತನಾಡಿ, ಅತಿಥಿ ಉಪನ್ಯಾಸಕರು ಎರಡು ಕಡೆ 15 ಗಂಟೆಗಳ ಉಪನ್ಯಾಸ ಕಾರ್ಯಭಾರಕ್ಕೆ ಮಾಡುತ್ತಿರುವುದು ಗಮನಕ್ಕೆ ಬಂದಿರುತ್ತದೆ ಇದರ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಮಾನ್ಯ ಕುಲಪತಿಗಳಲ್ಲಿ ಮನವಿ ಮಾಡಿಕೊಂಡರು ಹಾಗೂ ಇದರ ಬಗ್ಗೆ ಜಂಟಿ ನಿರ್ದೇಶಕರು ಸಹ ಎರಡು ಕಡೆ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವರ ಮಾಹಿತಿ ಪಡೆಯಲು ಸಹಕರಿಸಬೇಕಾಗಿ ಮನವಿ ಮಾಡಿಕೊಂಡರು. ಜಂಟಿ ನಿರ್ದೇಶಕರು ಮಾತನಾಡಿ, ಎರಡು ಕಡೆ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ಸರ್ಕಾರದ ಆದೇಶವಿದ್ದರೆ ಮಾತ್ರ ಅವರ ವಿರುದ್ಧ ಕ್ರಮ ಕೈಗೊಳ್ಳಬಹುದು ಇಲ್ಲವಾದರೇ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದರು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**      **ಕುಲಪತಿಗಳು ಮತ್ತು ಅಧ್ಯಕ್ಷರು**